ಕರ್ನಾಟಕ ಮಾಹಿತಿ ಆಯೋಗದಲ್ಲಿ ದಿ: 15–05–2019 ರಂದು ಮಧ್ಯಾಹ್ನ 03:00 ಗಂಟೆಗೆ ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು

ಸಭೆಯಲ್ಲಿ ಹಾಜರಿದ್ದವರು:–

1. ಶ್ರೀ ಎನ್.ಸಿ. ಶ್ರೀನಿವಾಸ, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು.
2. ಶ್ರೀ ಎಲ್. ಕೃಷ್ಣಮೂರ್ತಿ, ರಾಜ್ಯ ಮಾಹಿತಿ ಆಯುಕ್ತರು.
3. ಶ್ರೀ ಎನ್.ಪಿ. ರಮೇಶ್. ರಾಜ್ಯ ಮಾಹಿತಿ ಆಯುಕ್ತರು.
4. ಶ್ರೀ ಪಿ.ಪಿ. ವಿಜಯ ಕುಮಾರ್, ರಾಜ್ಯ ಮಾಹಿತಿ ಆಯುಕ್ತರು.
5. ಶ್ರೀ ಎಸ್.ಎಲ್. ಪಾಟೀಲ್, ರಾಜ್ಯ ಮಾಹಿತಿ ಆಯುಕ್ತರು.
6. ಶ್ರೀ ಹೆಚ್.ಪಿ. ಸುಧಾಮ ದಾಸ್, ರಾಜ್ಯ ಮಾಹಿತಿ ಆಯುಕ್ತರು.
7. ಡಾ॥ ಕೆ.ಇ. ಕುಮಾರಸ್ವಾಮಿ, ರಾಜ್ಯ ಮಾಹಿತಿ ಆಯುಕ್ತರು.
8. ಶ್ರೀ ಎಸ್.ಎಂ. ಸೋಮಶೇಖರ, ರಾಜ್ಯ ಮಾಹಿತಿ ಆಯುಕ್ತರು.
9. ಶ್ರೀ ಕೆ.ಪಿ. ಮಂಜುನಾಥ, ರಾಜ್ಯ ಮಾಹಿತಿ ಆಯುಕ್ತರು.
10. ಶ್ರೀಮತಿ ಹೊನ್ನಾಂಬ .ಎಸ್, ಕಾರ್ಯದರ್ಶಿ.

ಪ್ರಾರಂಭದಲ್ಲಿ ಆಯೋಗದ ಕಾರ್ಯದರ್ಶಿಗಳಾದ ಶ್ರೀಮತಿ ಹೊನ್ನಾಂಬ .ಎಸ್ ರವರು ಸಭೆಯ ಅಧ್ಯಕ್ಷತೆ ವಹಿಸಿದ್ದ ಮಾನ್ಯ ಮುಖ್ಯ ಮಾಹಿತಿ ಆಯುಕ್ತರು ಮತ್ತು ಸಭೆಯಲ್ಲಿ ಉಪಸ್ಥಿತರಿದ್ದ ಇತರ ಮಾಹಿತಿ ಆಯುಕ್ತರನ್ನು ಸ್ವಾಗತಿಸುತ್ತಾ, ದಿನಾಂಕ: 30–11–2018 ಮತ್ತು 20–03–2019ರ ಸಭೆಯ ನಡವಳಿಯ ಅಂಶಗಳ ಅನುಪಾಲನಾ ವರದಿಯನ್ನು ಮಂಡಿಸಿದರು. ಸದರಿ ವರದಿಯನ್ನು ಸಭೆಯು ವಿವರವಾಗಿ ಚರ್ಚಿಸಿ ಈ ಕೆಳಕಂಡಂತೆ ಅನುಮೋದಿಸಲಾಯಿತು.

## ಅನುಪಾಲನಾ ವರದಿ

### 1) ಮಾನ್ಯ ಆಯುಕ್ತರುಗಳಿಗೆ ಲ್ಯಾಪ್‌ಟಾಪ್‌ನ್ನು ಒದಗಿಸುವ ಬಗ್ಗೆ.

ಆಯೋಗಕ್ಕೆ ಹೊಸದಾಗಿ ನೇಮಕವಾಗಿರುವ ಮಾನ್ಯ ಮುಖ್ಯ ಮಾಹಿತಿ ಆಯುಕ್ತರಿಗೆ ಐಪ್ಯಾಡ್/ಲ್ಯಾಪ್‌ಟಾಪ್ ಹಾಗೂ ಇಬ್ಬರು ಆಯುಕ್ತರುಗಳಿಗೆ ಲ್ಯಾಪ್‌ಟಾಪ್‌ಅನ್ನು ಒದಗಿಸಲು ತೀರ್ಮಾನಿಸಲಾಯಿತು.

(ಕ್ರಮ: ಕಾರ್ಯದರ್ಶಿ)

### 2) ಕಛೇರಿ ಉಪಯೋಗಕ್ಕಾಗಿ ವೈಫೈಅನ್ನು ಅಳವಡಿಸುವ ಬಗ್ಗೆ.

ಮಾನ್ಯ ಮುಖ್ಯ ಮಾಹಿತಿ ಆಯುಕ್ತರು/ಆಯುಕ್ತರುಗಳು/ಕಾರ್ಯದರ್ಶಿರವರ ಕಛೇರಿ ಉಪಯೋಗಕ್ಕಾಗಿ ಉತ್ತಮವಾಗಿ ಸೇವೆಯನ್ನು ನೀಡುತ್ತಿರುವ ಬಿಎಸ್‌ಎನ್‌ಎಲ್ ಸಂಸ್ಥೆಯವರಿಂದ ವೈಫೈಯನ್ನು ಅಳವಡಿಸಲು ಕ್ರಮ ಕೈಗೊಳ್ಳಲು ಕಾರ್ಯದರ್ಶಿಯವರಿಗೆ ಅಧಿಕಾರ ನೀಡಲಾಯಿತು.

(ಕ್ರಮ: ಕಾರ್ಯದರ್ಶಿ)